**ಕರ್ನಾಟಕ ಸರ್ಕಾರ**

**ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-12.**

ಸಂಖ್ಯೆ: ಪಪೂಶಿ/ಲೆಪ-03/ಅನಿ.ಅಂ.ನೌ.ಸಂ/2014-15 ದಿನಾಂಕ: 27-01-2015.

**ಅನುದಾನ ಬಿಡುಗಡೆ ಆದೇಶ**

ವಿಷಯ:- 2014-15ನೇ ಸಾಲಿನಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಅನಿಮಣ ಅಂಶಕಾಲಿಕ ನೌಕರರ ಸಂಭಾವನೆ ವೆಚ್ಚ ಭರಿಸಲು ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:- 1) ಸರ್ಕಾರದ ಆದೇಶ ಸಂಖ್ಯೆ: ಆಇ 05 ಟಿಎಫ್‌ಪಿ 2012. ದಿ: 26-06-2012.
2) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಎಫ್‌ಡಿ 1 ಬಿಪಿಇ 2014. ಬೆಂಗಳೂರು. ದಿನಾಂಕ: 07-03-2014
3) ಈ ಕಛೇರಿ ಜ್ಞಾಪನ ಸಂಖ್ಯೆ: ಪಪೂಶಿ/ಸಿಬ್ಬಂದಿ-1/ಎ(1)/ಅನಿ-ಅಂಶ-ಕಾ/1/2014-15. ದಿನಾಂಕ: 22-01-2015.

************

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿನ ಅಧಿಕಾರ ಪ್ರತ್ಯಾಯೋಜನೆಯಂತೆ 2014-15ನೇ ಸಾಲಿನಲ್ಲಿ ಉಲ್ಲೇಖ (3)ರಲ್ಲಿನ ನಿರ್ದೇಶಕರ ಕಛೇರಿ ಜ್ಞಾಪನದಲ್ಲಿ ನೀಡಲಾಗಿರುವ ಅನುಮತಿಯಂತೆ ದಿನಾಂಕ: 01/06/2014 ರಿಂದ ದಿನಾಂಕ: 30/09/2014 ರವರೆಗೆ ಹಾಗೂ ದಿನಾಂಕ: 01-11-2014ರಿಂದ 31-03-2015 ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಪಡೆದಿರುವ/ಪಡೆಯುವ ಅನಿಮಣ ಅಂಶಕಾಲಿಕ ನೌಕರರ ಸಂಭಾವನೆ ನೀಡುವ ಸಲುವಾಗಿ ಸಾದಿಲ್ವಾರು ವೆಚ್ಚ ಭರಿಸಲು **ಲೆಕ್ಕ ಶೀರ್ಷಿಕೆ "2202-02-109-0-13-059 (ಯೋಜನೇತರ)"** (ಸಾದಿಲ್ವಾರು ವೆಚ್ಚ) ಅಡಿಯಲ್ಲಿ ಸಂಬಂಧಪಟ್ಟ ಕಾಲೇಜುಗಳಿಗೆ ತಲಾ ರೂ. **18000/ (ಹದಿನೆಂಟು ಸಾವಿರಗಳು ಮಾತ್ರ)** ಗಳನ್ನು ಮರುಹಂಚಿಕೆ ಮಾಡಲು ಸೂಚಿಸಿ ಆಯಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅವರ ಹೆಸರಿನ ಮುಂದೆ ಸೂಚಿಸಿರುವಂತೆ ಅನುದಾನ ಬಿಡುಗಡೆ ಮಾಡಿದೆ.

| ಕ್ರ.ಸಂ | ಜಿಲ್ಲೆಯ ಹೆಸರು | ಒಟ್ಟು ಕಾಲೇಜುಗಳ ಸಂಖ್ಯೆ | ಬಿಡುಗಡೆಗೊಳಿಸಲಾಗಿರುವ ಅನುದಾನ (ರೂ.ಗಳಲ್ಲಿ) |
|---|---|---|---|
| 1. | ಬೆಂಗಳೂರು ಉತ್ತರ | 2 | 36,000 |
| 2. | ಬೆಂಗಳೂರು ದಕ್ಷಿಣ | 2 | 36,000 |
| 3. | ಬೆಂಗಳೂರು ಗ್ರಾಮಾಂತರ | 3 | 54,000 |
| 4. | ಬಳ್ಳಾರಿ | 4 | 72,000 |
| 5. | ಬೆಳಗಾಂ | 3 | 54,000 |
| 6. | ಬಾಗಲಕೋಟೆ | 7 | 1,26,000 |
| 7. | ಬೀದರ್ | 9 | 1,62,000 |
| 8. | ದಾವಣಗೆರೆ | 27 | 4,86,000 |

---2

| | | | |
|---|---|---|---|
| 9. | ಚಿಕ್ಕಮಗಳೂರು | 2 | 36,000 |
| 10. | ಗದಗ | 7 | 1,26,000 |
| 11. | ಹಾವೇರಿ | 9 | 1,62,000 |
| 12. | ಧಾರವಾಡ | 5 | 90,000 |
| 13. | ಗುಲ್ಬರ್ಗಾ | 33 | 5,94,000 |
| 14. | ಹಾಸನ | 60 | 10,80,000 |
| 15. | ಚಾಮರಾಜನಗರ | 9 | 1,62,000 |
| 16. | ಮೈಸೂರು | 38 | 6,84,000 |
| 17. | ಮಂಡ್ಯ | 8 | 1,44,000 |
| 18. | ಕೊಪ್ಪಳ | 14 | 2,52,000 |
| 19. | ರಾಯಚೂರು | 16 | 2,88,000 |
| 20. | ಉತ್ತರ ಕನ್ನಡ | 1 | 18,000 |
| 21. | ಉಡುಪಿ | 2 | 36,000 |
| 22. | ದಕ್ಷಿಣ ಕನ್ನಡ | 5 | 90,000 |
| 23. | ಶಿವಮೊಗ್ಗ | 1 | 18,000 |
| 24. | ತುಮಕೂರು | 45 | 8,10,000 |
| 25. | ಕೊಡಗು | 5 | 90,000 |
| 26. | ಚಿಕ್ಕಬಳ್ಳಾಪುರ | 1 | 18,000 |
| 27. | ರಾಮನಗರ | 21 | 3,78,000 |
| 28. | ಯಾದಗಿರಿ | 2 | 36,000 |
| | **ಒಟ್ಟು** | **341** | **61,38,000** |

**ರೂಪಾಯಿ ಅರವತ್ತೊಂದು ಲಕ್ಷದ ಮೂವತ್ತೆಂಟು ಸಾವಿರಗಳು ಮಾತ್ರ**

**<u>ಷರತ್ತುಗಳು:</u>**

1. ಈ ಅನುದಾನವನ್ನು 31.03.2015 ರೊಳಗೆ ಬಳಸಿಕೊಳ್ಳತಕ್ಕದ್ದು.
2. ಅನುದಾನ ಬಳಕೆಯಾಗದೇ ಗತಿಸಿ ಹೋದಲ್ಲಿ (Lapse ಆದಲ್ಲಿ) ಯಾವುದೇ ಕಾರಣಕ್ಕೂ 2014-15ನೇ ಸಾಲಿನ ವೆಚ್ಚಕ್ಕೆ 2015-16ನೇ ಸಾಲಿನಲ್ಲಿ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.

3. ಆಯಾ ಜಿಲ್ಲಾ ಉಪನಿರ್ದೇಶಕರು ಸದರಿ ಲೆಕ್ಕಶೀರ್ಷಿಕೆಗೆ ಸಂಬಂಧಿಸಿದ ಮಾಸಿಕ ವೆಚ್ಚದ ಮಾಹಿತಿಯನ್ನು ಕಾಲೇಜುಗಳ ಪ್ರಾಂಶುಪಾಲರಿಂದ ಪಡೆದು ಕ್ರೋಢೀಕರಿಸಿ ನಿರ್ದೇಶಕರ ಕಛೇರಿಗೆ ಒದಗಿಸುವುದು. ಹಾಗೂ 2015ರ ಮಾರ್ಚ್ ಕೊನೆಯ ವಾರದೊಳಗೆ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.

ನಿರ್ದೇಶಕರ ಪರವಾಗಿ,
ಪದವಿಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳು:-

1 ಉಪನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಬೆಂಗಳೂರು.
2 ಸಂಬಂಧಪಟ್ಟ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮಾಹಿತಿಗಾಗಿ ಮುಂದಿನ ಸೂಕ್ತ ಕ್ರಮಕ್ಕಾಗಿ
3 ಜಂಟಿ ನಿರ್ದೇಶಕರು (ಆಡಳಿತ), ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು-ರವರಿಗೆ ಮಾಹಿತಿಗಾಗಿ.
4 ಸಹಾಯಕ ನಿರ್ದೇಶಕರು, ಇ-ಆಡಳಿತ, ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು-ರವರಿಗೆ ಮುಂದಿನ ಕ್ರಮಕ್ಕಾಗಿ.
5 ಕಛೇರಿ ಪ್ರತಿ.